# *ಪುಸ್ತಕಗಳು ವಿರಾಮೋದ್ಯಮ ಮಾರುಕಟ್ಟೆಯ ನಿಕೃಷ್ಟ ಸರಕುಗಳೆ?* *

**ಎಂ. ಎಸ್. ಶ್ರೀಧರ್**

ಇತ್ತೀಚಿನ ಸಂದರ್ಶನವನ್ನಾಧರಿಸಿದ ಸರ್ವೇಕ್ಷಣೆಯೊಂದರಲ್ಲಿ ವೇತನದ ಬಾಕಿ ಮೊತ್ತ ಪಡೆದ ಆಯ್ದ ನೂರು ಮಂದಿ ಶಾಲಾ ಉಪಾದ್ಯಾಯರುಗಳು ಈ ಹಣವನ್ನು ಹೇಗೆ ವ್ಯಯಿಸಲು ಇಚ್ಚಿಸುತ್ತಾರೆ ಮತ್ತು ಅವರ ಆದ್ಯತೆಯ ಸರಕುಗಳು ಅಥವ ಸೇವೆಗಳು ಯಾವುವು ಎಂದು ಗುರುತಿಸಲು ಕೇಳಲಾಗಿತ್ತು. ಬಹಳ ಶೋಚನೀಯ ಸಂಗತಿಯೆಂದರೆ ಯಾರೊಬ್ಬರೂ ಪುಸ್ತಕ ಅಥವ ನಿಯತಕಾಲಿಕೆ ಕೊಳ್ಳುವುದನ್ನು ಮೊದಲ ಹತ್ತು ಆದ್ಯತೆಗಳಲ್ಲಿ ಸೇರಿಸಿರಲಿಲ್ಲ. ಇದೇ ಪ್ರಶ್ನೆಯನ್ನು ಇತರರಿಗೆ ಹಾಕಿದ್ದರೂ ಅಷ್ಟೇನೂ ಭಿನ್ನವಾದ ಉತ್ತರ ದೂರಕುತ್ತಿರಲಿಲ್ಲ ಎನ್ನಬಹುದು. ಶಿಕ್ಷಣ ಕ್ಷೇತ್ರದಲ್ಲಿಯೇ ಈ ಪರಿಸ್ಥಿತಿಯಿರುವಾಗ ಇನ್ನು ಶ್ರೀಸಾಮಾನ್ಯನ ಆದ್ಯತೆ ಪುಸ್ತಕ ಕೂಳ್ಳುವತ್ತ ಇಲ್ಲ ಎನ್ನುವ ಆರೋಪ ಎಷ್ಟು ಸಮಂಜಸ ಎಂದು ಯೋಚಿಸಬೇಕಾಗುತ್ತದೆ. ಪುಸ್ತಕ ಕೊಳ್ಳುವ ಮತ್ತು ಕೊಂಡು ಓದುವ ಹವ್ಯಾಸ ನಮ್ಮಲ್ಲಿ ತೃಪ್ತಿಕರವಾಗಿಲ್ಲ ಎಂಬುದು ನಿಶ್ಚಿತ.

**ಪುಸ್ತಕೋದ್ಯಮ:** ಓದುವ ಹವ್ಯಾಸದ ವಿಷಯ ಪ್ರಸ್ತಾಪವಾದಾಗಲೆಲ್ಲ ಗ್ರಂಥಾಲಯಗಳ ಬಳಕೆ ಮತ್ತು ಪುಸ್ತಕಗಳ ಮಾರಾಟ ಸಮರ್ಪಕವಾಗಿ ಆಗುತ್ತಿಲ್ಲವೆಂಬ ಮಾತು ಕೇಳಿಬರುತ್ತಿದೆ. ಭಾರತ ಜಗತ್ತಿನ ೨ನೇ ಅತೀ ಹೆಚ್ಚು ಅಕ್ಷರಸ್ಥ ಜನಸಂಖ್ಯೆಯುಳ್ಳ ರಾಷ್ಟ್ರ. ಭಾರತದ ಅಕ್ಷರಸ್ಥ ಮಧ್ಯಮ ವರ್ಗ ಅಮೇರಿಕದ ಒಟ್ಟು ಜನಸಂಖ್ಯೆಯಷ್ಟಿದೆ. ಹೀಗಿದ್ದೂ ಅಮೇರಿಕಾದಲ್ಲಿ ಗ್ರಂಥಾಲಯಗಳು ಖರೀದಿಸುವ ಪುಸ್ತಕಗಳು ಒಟ್ಟು ಮಾರಾಟದ ಶೇ ೫ ಕ್ಕಿಂತ ಕಡಿಮೆ ಇದ್ದು ಉಳಿದ ಶೇ ೯೫ ಖರೀದಿ ನಾಗರೀಕರದಾಗಿದ್ದು ಇದರಲ್ಲಿ ಶೇ ೮೦ ರಷ್ಟನ್ನು ಶೇ ೨೦ ರಷ್ಟು ಓದುಗರೇ ಖರೀದಿಸುತ್ತಾರೆ. ಆದರೆ ಭಾರತದಲ್ಲಿ ವ್ಯಕ್ತಿಗತ ಖರೀದಿ ಶೇ ೨೫ ಮಾತ್ರ (ಪಟ್ಟಿ ೧ ನೋಡಿ). ಇವರಲ್ಲಿ ಶೇ ೨ ರಷ್ಟು (ಅಂದರೆ ೨ ಕೋಟಿ) ಮಾತ್ರ ಇರುವ ಆಂಗ್ಲ ಭಾಷೆ ಓದುಗರು ಖರೀದಿಸುವ ಆಂಗ್ಲ ಪುಸ್ತಕಗಳು ಸುಮಾರು ಶೇ ೨೧ ರಷ್ಟು. ಅಲ್ಲದೆ ಅಮೇರಿಕದಲ್ಲಿ

**ಪಟ್ಟಿ ೧**

**ಪುಸ್ತಕಗಳ ಖರೀದಿ (ಶೇ. ದಲ್ಲಿ)**

| ದೇಶ | ಸಂಸ್ಥೆಗಳಿಂದ | ವ್ಯಕ್ತಿಗಳಿಂದ |
|---|---|---|
| ಅಮೇರಿಕ | ೫ | ೯೫ |
| ಬ್ರಿಟನ್ | ೧೨ | ೮೮ |
| ಕೆನಡ | ೨೨ | ೭೮ |
| ಭಾರತ | ೭೫ | ೨೫ |

ಗ್ರಂಥಾಲಯಗಳು ಶೇ ೫ ರಷ್ಟು ಪುಸ್ತಕಗಳನ್ನು ಖರೀದಿಸಿದರೂ ಅವುಗಳನ್ನು ಓದುಗರಿಗೆ ಎರವಲು ಸೇವೆಯಲ್ಲಿ ಒದಗಿಸಿ ಬಳಸಿದ ಸಂಖ್ಯೆ ಶೇ ೯೫ ರಷ್ಟು ನೇರ ಮಾರಾಟವಾದ ಪುಸ್ತಕಗಳ ಸಂಖ್ಯೆಗೆ ಸಮನಾಗಿರುತ್ತದೆ. ಅಂದರೆ ಜನಸಂಖ್ಯೆಯ ಶೇ ೭೧ ರಷ್ಟು ಸದಸ್ಯರಿರುವ ಅಮೇರಿಕಾದ ಸಾರ್ವಜನಿಕ ಗ್ರಂಥಾಲಯಗಳಿಂದ ಪ್ರತಿ ಸದಸ್ಯ ವರ್ಷಕ್ಕೆ ಸರಾಸರಿ ೨ ಪುಸ್ತಕಗಳನ್ನು ಎರವಲು ಪಡೆಯುವುದು ಪುಸ್ತಕೋದ್ಯಮದ ಶೇ ೯೫ ರ ಮಾರಟಕ್ಕೆ ಸಮನಾಗಿರುತ್ತದೆ. ಆದರೆ ನಮ್ಮ ದೇಶದಲ್ಲಿ ಸಂಸ್ಥೆಗಳು ಖರೀದಿಸುವ ಪಾಲು ಶೇ ೭೫ ರಷ್ಟಿದ್ದರೂ ಅವುಗಳ ಬಳಕೆ ತೀರ ಕಡಿಮೆ. ಪುಸ್ತಕೋದ್ಯಮದ ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚಾಗಿ ನಾಗರೀಕರ ಕೊಳ್ಳುವಿಕೆಯ ಮೇಲೆ ಅವಲಂಬಿಸಿದ್ದರೆ ನಮ್ಮಲ್ಲಿ ಸಂಸ್ಥೆಗಳ ಮೇಲೆ ಅವಲಂಬಿಸಿದೆ. ಪಟ್ಟಿ ೧ ರಲ್ಲಿ ತೋರಿಸಿರುವ ನಾಲ್ಕು ದೇಶಗಳಲ್ಲಿ ಸಂಸ್ಥೆಗಳು ಹಾಗು ವ್ಯಕ್ತಿಗಳು ಖರೀದಿಸಿವ ಪುಸ್ತಕಗಳ ಪ್ರಮಾಣವನ್ನು (ಶೇಕಡ) ಗಮನಿಸಿದರೆ ಭ್ಹಾರತದಲ್ಲೆ ವ್ಯಕ್ತಿಗತ ಪುಸ್ತಕಗಳ ಖರೀದಿ ತೀರ ಕಡಿಮೆ. ಕರ್ನಾಟಕದಲ್ಲಿ ಪುಸ್ತಕ ಮಾರುಕಟ್ಟೆ ಸುಮಾರು ೨೫೦ ಕೋಟಿ ರೂಗಳಷ್ಟಿದ್ದು, ಇದರಲ್ಲಿ ೧೦೦ ರಿಂದ ೨೦೦ ಕೋಟಿ ರೂ ಪಠ್ಯ ಪುಸ್ತಕಗಳದ್ದಾಗಿದೆ. ಇದರಲ್ಲಿ ಕನ್ನಡ ಪುಸ್ತಕಗಳಿಗೆ ೩ ರಿಂದ ೪ ಕೋಟಿಗಳ ಮಾರುಕಟ್ಟೆ ಇದೆ ಎಂದು ಅಂದಾಜಿಸಲಾಗಿದೆ. ಅಂದರೆ ಪುಸ್ತಕ ಕೊಳ್ಳುವ ಹವ್ಯಾಸ ನಮ್ಮಲ್ಲಿ ಕಡಿಮೆ ಎಂಬುದು ನಿರ್ವಿವಾದ. ಇದಕ್ಕೆ ಹಲವಾರು ಕಾರಣಗಳಿದ್ದು ನಾಗರೀಕರ ವರಮಾನ/ ಉಳಿತಾಯ ಕಡಿಮೆ ಮತ್ತು ಪುಸ್ತಕಗಳ ಬೆಲೆ ಜಾಸ್ತಿ ಎನ್ನುವುದು ಯಾವಾಗಲೂ ಕೇಳಿ ಬರುವ ಮಾತು.

**ವಿರಾಮೋದ್ಯಮ:** ಮಾಹಿತಿ ತಂತ್ರಜ್ಞಾನ ಮತ್ತು ವಿರಾಮೋದ್ಯಮಗಳೆರಡೂ ಗ್ರಾಹಕನ ಬಿಡುವಿನ ವೇಳೆಗೆ ಹಾಗೂ ಮನರಂಜನೆಯ ಖರ್ಚಿನ ಬಾಬ್ತಿಗಾಗಿ ಸ್ಪರ್ಧೆಗಿಳಿಯುವುದಲ್ಲದೆ, ಮಾಹಿತಿ ತಂತ್ರಜ್ಞಾನವು ವರಮಾನದ ಕಡಿತವಿಲ್ಲದೆ ಬಿಡುವಿನ ವೇಳೆಯನ್ನು ಹೆಚ್ಚಿಸಿದರೆ, ಮನರಂಜಿನೆಯ ಸೇವೆ/ ಸರಕುಗಳು ವಿರಾಮದ ಸಮಯ ಹೆಚ್ಚಾಗುತ್ತಿದ್ದಂತೆ ಢಾಳಾಗಿ ಬೆಳೆದು ಯಾವುದೇ ಅತ್ಯವಶ್ಯಕ ಉದ್ಯಮಕ್ಕೆ ಸರಿಸಾಟಿಯಾಗಿ ಹೆಚ್ಚು ಆಕರ್ಷಣೀಯವಾದ ಉದ್ಯಮವಾಗಿ ಬೆಳೆದು ನಿಂತಿದೆ.

ವಿರಾಮೋದ್ಯಮವು ಗ್ರಾಹಕರಿಗಾಗಿ ವಿರಾಮದ ಅಥವ ಮನರಂಜನಾ ಸೇವೆಗಳು, ಸರಕುಗಳು ಮತ್ತು ಸೌಲಭ್ಯಗಳನ್ನು ಒದಗಿಸುತ್ತದೆ. ಸಾರ್ವಜನಿಕ ಗ್ರಂಥಾಲಯಗಳನ್ನು ಒಂದು ವಿರಾಮದ ಸೌಲಭ್ಯ ಎಂದೂ, ಪುಸ್ತಕಗಳು ಮತ್ತು ನಿಯತಕಾಲಿಕೆಗಳನ್ನು ವಿರಾಮ ಸರಕುಗಳೆಂದು ಪರಿಗಣಿಸಬಹುದು. ಸಾಮಾನ್ಯವಾಗಿ

ಗ್ರಾಹಕ ವಿರಾಮೊದ್ಯಮದಿಂದ ಪಡೆಯುವುದು ಸೇವೆ, ಸರಕು ಮತ್ತು ಸೌಲಭ್ಯಗಳನ್ನೊಳಗೊಂಡ ಒಂದು ಸಂಯುಕ್ತ 'ಕೊಡುಗೆ' ಆಗಿದ್ದರೂ ಇವನ್ನು ವಿರಾಮ ಸೌಲಭ್ಯಗಳೆಂದೇ ಗುರುಸಲಾಗುವುದು.

**ಸರಕುಗಳ ಬೇಡಿಕೆಯ ವಿಶ್ಲೆಷಣೆ:** ವಿರಾಮದ ಸರಕುಗಳಲ್ಲಿ ದೀರ್ಘ ಬಾಳಿಕೆ ಬರುವಂತಹ ದೂರದರ್ಶನ, ರೇಡಿಯೋ ಮುಂತಾದವು ಹಾಗು ಒಮ್ಮೆಗೇ ನಶಿಸುವ ಅಥವ ವ್ಯಯವಾಗುವಂತಹ ಮದ್ಯ, ಸಿಗರೇಟು, ತಿನಿಸುಗಳು ಇತ್ಯಾದಿ ಸರಕುಗಳೂ ಇವೆ. ಮಾರುಕಟ್ಟೆಯಲ್ಲಿ ಸರಕುಗಳ ಬೇಡಿಕೆಯು ನಾಲ್ಕು ಪ್ರಮುಖ ನಿರ್ಧಾರಕಗಳನ್ನು / ನಿರ್ಣಾಯಕಗಳನ್ನು ಅವಲಂಬಿಸಿದೆ. ಅವುಗಳಾವುವೆಂದರೆ, ೧) ಸರಕಿನ ಬೆಲೆ ೨) ಗ್ರಾಹಕನ ವರಮಾನ ೩) ಇತರೆ ಸಂಬಂಧಿಸಿದ / ಪರ್ಯಾಯ ಸರಕುಗಳ ಬೆಲೆ ೪) ಗ್ರಾಹಕನ ಅಭಿರುಚಿ ಮತ್ತು ಇಷ್ಟಾನಿಷ್ಟಗಳು.

'ಬೆಲೆ ಆಧಾರಿತ ಬೇಡಿಕೆ' ಸರಕಿನ ಬೆಲೆಯ ಬದಲಾವಣೆಯಿಂದಾದ ಬೇಡಿಕೆಯ ಬದಲಾವಣೆಯನ್ನ ಅಳೆದರೆ, 'ವರಮಾನ ಆಧಾರಿತ ಬೇಡಿಕೆ' ಗ್ರಾಹಕನ ವರಮಾನದ ಬದಲಾವಣೆಯಿಂದಾದ ಸರಕಿನ ಬೇಡಿಕೆಯ ಏರಿಳಿತವನ್ನ ಅಳೆಯುತ್ತದೆ. ಒಂದು ಸರಕಿನ ಬೆಲೆಯ ಏರಿಳಿತದಿಂದಾಗಿ ಮತ್ತೊಂದು ಸರಕಿನ ಬೇಡಿಕೆಯ ಪ್ರಮಾಣದಲ್ಲಾಗುವ ಬದಲಾವಣೆಯನ್ನ ಗುರುತಿಸುವುದು ಮೂರನೆಯ ನಿರ್ಣಾಯಕ. ಒಂದು ಸರಕಿನ ಬೆಲೆಯ ಹೆಚ್ಚಳವು ಇನ್ನೊಂದರ ಬೇಡಿಕೆಯನ್ನ ಹೆಚ್ಚಿಸಿದರೆ ಅದನ್ನು 'ಪರ್ಯಾಯ ಸರಕು' ಎಂದೂ, ಬೇಡಿಕೆಯನ್ನು ತಗ್ಗಿಸಿದರೆ ಅದನ್ನು 'ಪೂರಕ ಸರಕು' ಎಂದೂ' ಕರೆಯುತ್ತಾರೆ. ಕೊನೆಯ ನಿರ್ಧಾರಕ 'ಗ್ರಾಹಕನ ಅಭಿರುಚಿ ಮತ್ತು ಇಷ್ಟಾನಿಷ್ಟಗಳು' ಅವನ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಗಳಿಗನುಗುಣವಾಗಿ ವೈವಿಧ್ಯಮಯವಾಗಿರುತ್ತವೆ. ಇವುಗಳನ್ನು ಸುಲಭವಾಗಿ ಅಳಯಲಾಗದು ಮತ್ತು ಅವು ಕಾಲಕಾಲಕ್ಕೆ ಬದಲಾಗುತ್ತಿರುವುದರಿಂದ ವಿಶ್ಲೆಷಣೆಗೆ ಅಷ್ಟಾಗಿ ಉಪಯೋಗಿಸಲಾಗುವುದಿಲ್ಲ.

ವರಮಾನ ಆಧಾರಿತ ಬೇಡಿಕೆಯನ್ನು ಆಧಾರವಾಗಿಟ್ಟು ಕೊಂಡು ಸರಕುಗಳನ್ನು ಮೂರು ವರ್ಗಗಳಾಗಿ ವಿಂಗಡಿಸಲ್ಲಾಗಿದೆ. **(೧) ಸಾಮಾನ್ಯ ಸರಕುಗಳು:** ಗ್ರಾಹಕನ ವರಮಾನದ ಹೆಚ್ಚಳವು ಕೆಲವು ಸರಕುಗಳ ಬೇಡಿಕೆಯನ್ನು ಹೆಚ್ಚಿಸುತ್ತದೆಯಾದರೂ ಬೇಡಿಕೆಯ ಹೆಚ್ಚಳವು ವರಮಾನದ ಹೆಚ್ಚಳದ ಪ್ರಮಾಣಕ್ಕಿಂತ ಕಡಿಮೆ ಇರುತ್ತದೆ. ಅಂದರೆ ವರಮಾನ ಆಧಾರಿತ ಬೇಡಿಕೆಯು ಧನಾತ್ಮಕವಾಗಿದ್ದು (positive income elasticity of demand) ಒಂದಕ್ಕಿಂತ ಕಡಿಮೆಯಿರುತ್ತದೆ. **(೨) ಕಡಿಮೆ ದರ್ಜೆಯ / ನಿಕೃಷ್ಟ**

**ಸರಕುಗಳು:** ವರಮಾನ ಹೆಚ್ಚಾದ ಗ್ರಾಹಕರು ಉತ್ತಮ ದರ್ಜೆಯ ಪರ್ಯಾಯ ಸರಕನ್ನು ಕೊಳ್ಳಲು ಇಚ್ಛಿಸುವುದರಿಂದ ಕೆಲವು ಸರಕುಗಳ ಬೇಡಿಕೆಯು ವರಮಾನ ಹೆಚ್ಚಾದಾಗ್ಯೂ ಕುಸಿಯುತ್ತದೆ. ಇದನ್ನು ನೇತ್ಯಾತ್ಮಕ ವರಮಾನ ಆಧಾರಿತ ಬೇಡಿಕೆ (negative income elasticity of demand) ಎಂದೂ ಅಂತಹ ಸರಕುಗಳನ್ನು ನಿಕೃಷ್ಟ ಸರಕುಗಳೆಂದೂ ಕರೆಯುತ್ತಾರೆ. **(೩) ಉತ್ತಮ ದರ್ಜೆಯ/ ಐಷಾರಾಮದ ಸರಕುಗಳು:** ಈ ವರ್ಗದ ಸರಕುಗಳ ಬೇಡಿಕೆಯ ಹೆಚ್ಚಳದ ಪ್ರಮಾಣವು ಗ್ರಾಹಕನ ವರಮಾನದ ಹೆಚ್ಚಳದ ಪ್ರಮಾಣಕ್ಕಿಂತಲು ಹೆಚ್ಚಿರುತ್ತದೆ. ಅಂದರೆ ವರಮಾನ ಆಧಾರಿತ ಬೇಡಿಕೆಯು ಧನತ್ಮಕವಾಗಿರುತ್ತದೆ ಮತ್ತು ಒಂದಕ್ಕಿಂತ ಹೆಚ್ಚಿರುತ್ತದೆ.

ಪುಸ್ತಕ ಕೊಳ್ಳುವ ಬಗ್ಗೆ, ಓದುವ ಹವ್ಯಾಸದ ಬಗ್ಗೆ ನಡೆಸುವ ಸಮೀಕ್ಷೆಗಳು, ಸಾರ್ವಜನಿಕ ಗ್ರಂಥಾಲಯಗಳ ಸರ್ವೇಕ್ಷಣೆ / ಅಧ್ಯಯನಗಳು ಈ ಮೇಲಿನ ದೃಷ್ಟಿಕೋನಕ್ಕೆ ಒತ್ತು ನೀಡಿ, ಸಾರ್ವಜನಿಕರು ತಮ್ಮ ವಿರಾಮ ಸಮಯವನ್ನು ಹೇಗೆ ಕಳೆಯುತ್ತಾರೆ? ಗ್ರಾಹಕರು ತಮ್ಮ ಹಣವನ್ನು ವಿರಾಮೋದ್ಯಮದಲ್ಲಿ ಹೇಗೆ ತೊಡಗಿಸಲು ಇಚ್ಛಿಸುತ್ತಾರೆ? ಓದಿಗೆ ಪೂರಕವಾದ / ಪರ್ಯಾಯವಾದ ಅಥವ ಓದುಗರ ಆನಂದವನ್ನು ಹೆಚ್ಚಿಸುವ ಸರಕುಗಳು ಯಾವುವು? ಪುಸ್ತಕಗಳು ಮೇಲೆ ನಮೂದಿಸಿದ ಮೂರರಲ್ಲಿ ಯಾವ ವರ್ಗಕ್ಕೆ ಸೇರುತ್ತವೆ? ಸಾಮಾನ್ಯ? ನಿಕೃಷ್ಟ? ಅಥವ ಐಷಾರಾಮವೆ? ಎಂಬುದನ್ನು ಅಮೂಲಾಗ್ರವಾಗಿ ಪರಿಶೋಧಿಸಬೇಕಾಗಿದೆ.

**ವಿರಾಮೋದ್ಯಮದ ಅಧ್ಯಯನಗಳು :** ಇತ್ತೀಚಿನ ಅಧ್ಯಯನವೊಂದರಲ್ಲಿ ಕೊಸ್ಟಾ (Costa, 1997; The Economist, 1997) ಎಂಬುವವರು ಕಳೆದ ಒಂದು ಶತಮಾನದ ಅಮೇರಿಕಾದ ಮನರಂಜನಾ ಹವ್ಯಾಸದ ಬಗ್ಗೆ ಸೊಂಶೋಧನೆ ನಡೆಸಿದಾಗ ಎಲ್ಲ ವರ್ಗದ ವರಮಾನವುಳ್ಳ ಜನರೂ ಮೋಜಿಗಾಗಿ ಹೆಚ್ಚೆಚ್ಚು ಹಣ ಹಾಗೂ ಸಮಯವನ್ನು ಮೀಸಲಿಡುತ್ತಿದ್ದುದು ತಿಳಿದು ಬಂತು (ಇಲ್ಲಿ ಮೋಜು ಎಂಬುದು ಮನರಂಜನೆ / ವಿರಾಮದ ಚಟುವಟಿಕೆಗಳನ್ನು ಸೂಚಿಸುತ್ತದೆ). ಒಂದು ಶತಮಾನದ ಅವಧಿಯಲ್ಲಿ ಅಮೇರಿಕಾದಲ್ಲಿ ವರಮಾನ ವಿಂಗಡಣೆಯು ಹೆಚ್ಚು ಹೆಚ್ಚು ಅಸಮತೋಲಿತ ವಾಗುತ್ತಿದ್ದಾಗ್ಯೂ ವಿರಾಮದ ಖರ್ಚು ಹೆಚ್ಚೆಚು ಸಮತೋಲಿತವಾಗಿ

**ಪಟ್ಟಿ ೨**
**ಅಮೇರಿಕನ್ನರ ಮನರಂಜನೆ ಮತ್ತು ವಾಚನ ಸಾಮಗ್ರಿ (ಪುಸ್ತಕ/ ನಿಯತಕಾಲಿಕೆ) ಗಳ ವೆಚ್ಚ**

| ವರ್ಷ | ಮನರಂಜನೆ ವೆಚ್ಚ (ವರಮಾನದ ಶೇ.) | ವಾಚನ ಸಾಮಗ್ರಿ ವೆಚ್ಚ (ಮನರಂಜನೆಯ ಶೇ.) |
|---|---|---|
| ೧೮೮೮–೯ | ೧.೯ | ೨೫.೫ |
| ೧೯೧೭–೯ | ೩.೨ | ೨೮.೮ |
| ೧೯೩೪–೬ | ೩.೫ | ೨೭.೨ |
| ೧೯೭೨–೩ | ೪.೬ | ೧೫.೩ |
| ೧೯೯೧ | ೫.೬ | ೧೫.೮ |

ಹರಡುತ್ತಿರುವುದು ಕಂಡು ಬಂದಿದೆ. ಸುಮಾರು ೧೯೮೮ ರಿಂದ ಈಚೆಗೆ ವಿರಾಮವು ಐಷಾರಾಮವೆಂಬ ಭಾವನೆ ಕರಗಿ ಅವಶ್ಯಕತೆ ಗಳಲ್ಲೊಂದಾಗುತ್ತಿದೆ. ಆಸಕ್ತಿದಾಯಕ ವಿಚಾರವೆಂದರೆ ೧೮೮೮ ರಲ್ಲಿ ತಮ್ಮ ವರಮಾನದ ಶೇ ೧.೯ ರಷ್ಟನ್ನು ಮನರಂಜನೆಗಾಗಿ ವ್ಯಯಿಸುತ್ತಿದ್ದ ಜನ ೧೯೯೧ ರಲ್ಲಿ ವರಮಾನದ ಶೇ ೫.೬ ರಷ್ಟನ್ನು ವ್ಯಯಿಸುತ್ತಿದ್ದಾರೆ (ಪಟ್ಟಿ ೨ ನೋಡಿ). ಮತ್ತೂ ಆಸಕ್ತಿದಾಯಕ ವಿಚಾರವೆಂದರೆ ಶತಮಾನದ ಆದಿಯಲ್ಲಿ ವ್ಯಕ್ತಿಯೊಬ್ಬನ ಶೇ ೧೦ ರಷ್ಟು ವರಮಾನ ಹೆಚ್ಚಳಕ್ಕೆ ಪ್ರತಿಯಾಗಿ ಮನರಂಜನೆಗಾಗಿ ಮಾಡುವ ವ್ಯಯವು ಶೇ ೨೦ ರಷ್ಟು ಹೆಚ್ಚುತ್ತಿತ್ತು. ಆದರೆ ೧೯೭೨–೭೩ ರ ಹೊತ್ತಿಗೆ ಶೇ ೧೦ ರ ವರಮಾನ ಹೆಚ್ಚಳವು ಮನರಂಜನೆಯ ಖರ್ಚನ್ನು ಶೇ ೧೫% ರಷ್ಟು ಮಾತ್ರ ಹೆಚ್ಚಿಸುತ್ತಿತ್ತು. ಇದರೊಂದಿಗೆ ಇನ್ನಿತರ ಕಾರಣಗಳಾದ ಅಮೇರಿಕನ್ನರ ವರಮಾನದಲ್ಲಿನ ಸರ್ವತೋಮುಖ ಹೆಚ್ಚಳ, ಅತೀ ಬಡವರಿಗೆ ಮೋಜಿಗಾಗಿ / ವಿರಾಮಕ್ಕಾಗಿ ಹೆಚ್ಚಿನ ವೇಳೆಯ ಲಭ್ಯತೆ ಇಲ್ಲದಿರುವುದು, ಅಗ್ಗವಾದ ಮತ್ತು ಸುಲಭಲಭ್ಯವಾದ ಮನರಂಜನೆಯ ಚಟುವಟಿಕೆಗಳು ಮತ್ತು ತಾಂತ್ರಿಕ ಔನ್ನತ್ಯದಿಂದಾಗಿ ಮನರಂಜನೆಯು democratise ಆಗಿ ಸುಲಭಸಾಧ್ಯವಾಗಿ ಶ್ರೀಸಾಮಾನ್ಯನ ಕೈಗೆಟುಕುವಂತಾಗಿ ಮನರಂಜನೆಗಾಗಿ ವ್ಯಯಿಸುವ ಹಣ ಮತ್ತು ವೇಳೆಯ ಪರಿಭಾಷೆಯೂ ಬದಲಾಗಿದೆ. ಪಟ್ಟಿ ೨ ರಲ್ಲಿ ಗಮನಿಸ ಬೇಕಾದ ಮುಖ್ಯ ಅಂಶ ಎಂದರೆ ಕಳೆದ ಒಂದು ಶತಮಾನದಲ್ಲಿ **ಮನರಂಜನೆ ವೆಚ್ಚ** ವರಮಾನದ ಶೇ ೧.೯ ರಿಂದ ೫.೬ ಕ್ಕೆ ಏರಿದ್ದರೂ **ವಾಚನ ಸಾಮಗ್ರಿ ವೆಚ್ಚ** ಮನರಂಜನೆ ವೆಚ್ಚದ ಶೇ ೨೫.೫ ರಿಂದ ೧೫.೮ ಕ್ಕೆ ಇಳಿದಿದೆ.

ಸಧ್ಯಕ್ಕೆ ಪುಸ್ತಕಗಳೂ ಸೇರಿದಂತೆ ಇತರ ಮನರಂಜನಾ ಚಟುವಟಿಕೆಗಳ ಬೆಲೆ ಮತ್ತು ಅಂತರ ಬೆಲೆ ಆಧಾರಿತ ಬೇಡಿಕೆಗಳ (cross price elasticity) ನಂಬಿಕಾರ್ಹವಾದ ಅಂದಾಜು ಲಭ್ಯವಿಲ್ಲ. ಪಾಶ್ಚಿಮಾತ್ಯ ದೇಶಗಳ ಸಾಮಾಜಿಕ ಸರ್ವೇಕ್ಷಣೆಗಳು ವಿರಾಮದ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ / ಆಸಕ್ತಿ ಮತ್ತು ಆದಾಯದ ನಡುವಿನ ನೇರ ಸಂಬಂಧವನ್ನು ಗುರುತಿಸಿವೆ. ಜೊತೆಗೆ ವಿರಾಮಕ್ಕೆ / ಮನರಂಜನೆಗೆ ಸಂಬಂಧಿಸಿದ ಸೇವೆ ಮತ್ತು ಸರಕುಗಳ ಬೇಡಿಕೆಯು ಗ್ರಾಹಕನ ವರಮಾನ ಮತ್ತು ಬಿಡುವಿಗೆ ತಕ್ಕಂತೆ ಬದಲಾಗುತ್ತಿದ್ದು, ಬೆಲೆಯ ಬಗೆಗಿನ ಕಾಳಜಿ ನಗಣ್ಯವಾಗಿರುವುದನ್ನು ಕಂಡುಕೊಂಡಿವೆ.

ಮನರಂಜನಾ ಸರಕುಗಳ ಬೇಡಿಕೆಯು ಬೆಲೆಗೆ ಅನುಗುಣವಾಗಿ ಬದಲಾಗುವುದಕ್ಕೆ (price elastic) ಇವುಗಳನ್ನು ಐಷಾರಾಮವೆಂದು ಪರಿಗಣಿಸಿರುವದೇ ಕಾರಣ ಎಂದು ತಾತ್ಕಾಲಿಕವಾಗಿ (ಮತ್ತು ಬಹುಶ:

ಸರಿಯಲ್ಲದ) ಅಭಿಪ್ರಾಯ ಪಡಬಹುದು. ಆದರೆ ಅತ್ಯಗತ್ಯ ವಸ್ತುಗಳಾದ ಆಹಾರ ಧಾನ್ಯಗಳು ಬೆಲೆಯ ಅಂಶಕ್ಕೆ ಅತೀತವಾಗಿವೆ (price inelastic), ಏಕೆಂದರೆ ಏನೇ ಬೆಲೆಯಾದರೂ ಜನರಿಗೆ ಇವು ಮೂಲಭೂತ ಅವಶ್ಯಕತೆಗಳಾದ್ದರಿಂದ ಖಂಡಿತವಾಗಿಯೂ ಕೊಳ್ಳುತ್ತಾರೆ.

ಪರ್ಯಾಯ ಸರಕುಗಳ ಅಸ್ತಿತ್ವವು ಅಥವ ದೊರಕುವಿಕೆಯು ಬೇಡಿಕೆಯ ಮೇಲೆ ಬೆಲೆ ಬದಲಾವಣೆಯ ಪರಿಣಾಮದ (price elasticity) ಪ್ರಮುಖ ನಿರ್ಧಾರಕ. ಆಹಾರ ಧಾನ್ಯಗಳಿಗೆ ಪರ್ಯಾಯಗಳಿಲ್ಲವಾದರೂ ಪುಸ್ತಕಕ್ಕೆ / ಗ್ರಂಥಾಲಯದ ಉಪಯೋಗಕ್ಕೆ ಅನೇಕ ಅಕರ್ಷಕ ಪರ್ಯಾಯಗಳಿವೆ. ಈ ಪರ್ಯಾಯಗಳಾದ (ವಿದ್ಯುನ್ಮಾನ ಮಾಧ್ಯಮಗಳಾದ) ರೇಡಿಯೋ, ಟಿ. ವಿ, ಮುಂತಾದವುಗಳೇ ಜನರ ಬಿಡುವಿನ ವೇಳೆಯನ್ನು ಆವರಿಸಿಕೊಂಡು / ಆಕ್ರಮಿಸಿಕೊಂಡು ಓದುವ ಹವ್ಯಾಸ, ಮತ್ತು ಗ್ರಂಥಾಲಯಗಳ ಉಪಯೋಗ ಕಡಿಮೆಯಾಗುತ್ತಿದೆಯೆಂಬ ಆತಂಕವನ್ನು ಸೃಷ್ಟಿಸುತ್ತಿರುವುದು (Sridhar, 1996).

ಅತ್ಯವಶ್ಯಕ ಸರಕುಗಳಂತಲ್ಲದೆ ವಿರಾಮದ ಸರಕುಗಳ ಬೇಡಿಕೆಯ ಮೇಲಿನ ಬೆಲೆ ಬದಲಾವಣೆಯ ಪರಿಣಾಮವು (price elasticity) ಒಂದಕ್ಕಿಂತ ಹೆಚ್ಚಿರುವುದರಿಂದ ಇವುಗಳನ್ನು ಐಷಾರಾಮದ ಸರಕುಗಳ ವರ್ಗಕ್ಕೆ ಸೇರಿಸಲಾಗುತ್ತದೆ. ***ಗ್ರಾಹಕನ ವರಮಾನ/ಸಂಪತ್ತು ವೃದ್ಧಿಸುತ್ತಿದ್ದಂತೆಯೇ*** ಆತ ಅದರ ಹೆಚ್ಚು ಭಾಗವನ್ನು ಇಂತಹ ಆಕರ್ಷಕ ಸರಕು / ಸೇವೆಗಳಿಗಾಗಿ ವ್ಯಯಿಸುತ್ತಾನೆ. ಆದರೆ ***ಪುಸ್ತಕ, ನಿಯತಕಾಲಿಕೆಗಳು ಮತ್ತು ಪತ್ರಿಕೆಗಳ ಮೇಲಿನ ವ್ಯಯ ಕಡಿಮೆಯಾಗುತ್ತಾ ಹೋಗುತ್ತದೆ*** ಯೆಂದು ಅಧ್ಯಯನಗಳಿಂದ ತಿಳಿದುಬಂದಿದೆ (Gratton, 1992). ವ್ಯಕ್ತಿಗೆ ಹೆಚ್ಚುಹೆಚ್ಚಾಗಿ ಲಭ್ಯವಾಗುತ್ತಿರುವ ವಿರಾಮ ಮತ್ತು ವರಮಾನ/ ಉಳಿತಾಯ ಪುಸ್ತಕಗಳನ್ನು ಕೊಳ್ಳುವುದಕ್ಕಾಗಿ ಮತ್ತು ಓದುವುದಕ್ಕಾಗಿ ವಿನಿಯೋಗವಾಗುತ್ತಿಲ್ಲ. ಬದಲಾಗಿ ವಿರಾಮೊದ್ಯಮದ ಇತರ ಸರಕುಗಳಿಗಾಗಿ ವ್ಯಯಿಸಲಾಗುತ್ತಿದೆ. ಇದರಿಂದಾಗಿ **ಪುಸ್ತಕಗಳು ವಿರಾಮೋದ್ಯಮದ 'ನಿಕೃಷ್ಟ' ಸರಕುಗಳಾಗುವುದು ಅನಿವಾರ್ಯವಾಗಿದೆ.** ಇದನ್ನು ಬೇಡಿಕೆಯ ಮೇಲೆ ವರಮಾನ ಬದಲಾವಣೆಯ ನೇತ್ಯಾತ್ಮಕ ಪರಿಣಾಮ (Negative income elasticity) ಎನ್ನಲಾಗಿದೆ. ಇದು ಪಾಶ್ಚಿಮಾತ್ಯ ದೇಶಗಳ ಅಧ್ಯಯನಗಳಲ್ಲಿ ತಿಳಿದುಬಂದಿದ್ದು, ಇಂತಹುದೇ ಅಧ್ಯಯನಗಳನ್ನ ನಮ್ಮ ಪರಿಸರದಲ್ಲಿಯೂ ನಡೆಸಿ ದೃಡಪಡಿಸುವದರೊಂದಿಗೆ ಇದಕ್ಕೆ ಪರಿಹರಗಳಿವೆಯೆ ಎಂದು ಅನ್ವೇಷಿಸಬೇಕಾಗಿದೆ. ವಿರಾಮೋದ್ಯಮವು ನಮ್ಮಲ್ಲಿ ಇನ್ನೂ

ವ್ಯವಸ್ಥಿತವಾಗಿಲ್ಲವಾಗಿ ಪುಸ್ತಕೋದ್ಯಮ ಮತ್ತು ಗ್ರಂಥಾಲಯಗಳನ್ನು ಈ ಉದ್ಯಮದ ಭಾಗಗಳೆಂದು ಪರಿಗಣಿಸಿಲ್ಲ.

**ಪುಸ್ತಕ ಸಂಸ್ಕೃತಿ:** ಒಟ್ಟಿನಲ್ಲಿ ಆರ್ಥಿಕವಾಗಿ ದುರ್ಭಲರಾದವರು ಪುಸ್ತಕಗಳನ್ನು ಕೊಳ್ಳಲಾರರು. ಹಣವಂತರು ಹೆಚ್ಚಿನ ಹಣವನ್ನು ಐಷಾರಾಮದ ಸರಕುಗಳಿಗೆ ಅವುಗಳ ಬೆಲೆ ದುಬಾರಿಯಾದರೂ ವಿನಯೋಗಿಸುತ್ತಾರೆ. ಇದರಿಂದಾಗಿ ಪುಸ್ತಕ ಸಂಸ್ಕೃತಿಯನ್ನ ಬೆಳೆಸಲು ನಮಗಿರುವುದು ಒಂದೇ ದಾರಿ. ಅದು ಗ್ರಂಥಾಲಯಗಳನ್ನ ಅಭಿವೃದ್ದಿಗೊಳಿಸಿ ಬಲಪಡಿಸುವುದು. ಓದುವ ಹವ್ಯಾಸದ ಜೊತೆಗೇ ಪುಸ್ತಕ ಕೊಂಡು ಓದುವ ಹವ್ಯಾಸವನ್ನೂ ಬೆಳೆಸಬೇಕಾಗಿರುವ ನಾವು, ಓದುವ ಹವ್ಯಾಸ ಮತ್ತು ಗ್ರಂಥಾಲಯಗಳ ಬಳಕೆಯನ್ನು ಇತರ ಪೂರಕ ಹಾಗು ಪ್ರತಿಸ್ಪರ್ಧಿ ಪರ್ಯಾಯ ಮನರಂಜನಾ ಚಟುವಟಿಕೆಗಳಿಂದ ಪ್ರತ್ಯೇಕವಾಗಿ ಪರಿಗಣಿಸದೆ ವಿರಾಮೋದ್ಯಮದ ಒಟ್ಟು ದೃಷ್ಟಿಯಲ್ಲಿಟ್ಟುಕೊಂಡು ಸಮಗ್ರ ಅಧ್ಯಯನ ಮಾಡಬೇಕಿದೆ.

ಇನ್ನು ವಿರಾಮ ಚಟುವಟಿಕೆಗಳ ಅಧ್ಯಯನದಲ್ಲಿ ಮೌಲ್ಯ ಎಂಬ ಬಹುಮುಖ್ಯ ಅಂಶವೊಂದಿದ್ದು ಇದನ್ನು ಗ್ರಂಥಗಳು ಇತರೆಲ್ಲ ಸರಕುಗಳಿಗಿಂತ ಉತ್ತಮವಾಗಿ ದೊರಕಿಸಬಲ್ಲವು. ನಾವು ಸೌಕರ್ಯ/ಸುಖಗಳ ವಿಚಾರ ಮಾಡಿದಾಗಲೂ, ಹೆಚ್ಚು ಸಮಯ ಹಾಗೂ ಹಣವನ್ನು ಮನರಂಜನಾ ಚಟುವಟಿಕೆಗಳಲ್ಲಿ ತೊಡಗಿಸಿದ ವ್ಯಕ್ತಿ ಹೆಚ್ಚು ಸುಖವಾಗಿ ಸಂತೋಷವಾಗಿರುತ್ತಾನೆಂದು ಹೇಳಲು ಬರುವುದಿಲ್ಲ. ಬರ್ಟ್ರಂಡ್ ರಸೆಲ್‌ನ ಪ್ರಕಾರ ವಿರಾಮ ವೇಳೆಯನ್ನು ಅತ್ಯಂತ ವಿವೇಕಯುತವಾಗಿ ಬಳಸಿಕೊಳ್ಳುವ ಸಾಮರ್ಥ್ಯವೇ ಯಾವುದೇ ನಾಗರೀಕತೆಯ ಅಂತಿಮ ಪರೀಕ್ಷೆ. ಈ ನಿಟ್ಟಿನಲ್ಲಿ ಅಮೇರಿಕನ್ನರ ಅತ್ಯಂತ ಲಾಭದಾಯಕ ಹಾಗು ಪರಿಣಾಮಕಾರಿ ಮನರಂಜನಾ ಚಟುವಟಿಕೆಗಳು ಕೂಡ ಪ್ರಶ್ನಾರ್ಹವಾಗುತ್ತವೆ.

ಜನರು ಎಷ್ಟು ಗಳಿಸಿದರು ಮತ್ತು ವ್ಯಯಿಸಿದರು ಎಂದು ಅಳತೆ ಮಾಡಬಹುದೇ ಹೊರತು ಅವರ ಜೀವನಮಟ್ಟ ಎಷ್ಟು ಒಳ್ಳೆಯದಿತ್ತು ಎಂಬುದು ಅಳತೆಗೆ ಸಿಗುವಂತಹುದೇ?. ಭಾರತದಂತಹ ಅಭಿವೃದ್ಧಿಶೀಲ ದೇಶದಲ್ಲಿ ಇದು ಇನ್ನೂ ಕಠಿಣ. ಇಲ್ಲಿನ ಅರ್ಥವ್ಯವಸ್ಥೆಯು ಸೇವೆ ಹಾಗೂ ಮನರಂಜನೆಯಲ್ಲಿನ ಕಾರ್ಮಿಕ ಶ್ರಮವನ್ನು ಪರಿಗಣಿಸುವುದಿಲ್ಲ. ಅಲ್ಲದೆ ವಿರಾಮ/ ಮನರಂಜನೆಗಾಗಿ

ಮಾಡುವ ಖರ್ಚಿನ ಲೆಕ್ಕವನ್ನಾಗಲಿ ಅಥವಾ ಇಷ್ಟನ್ನು ಮಾತ್ರವೇ ವಿರಾಮ ವೆಚ್ಚವೆಂಬ ಚೌಕಟ್ಟು ಹಾಕುವುದಾಗಲೀ ಸುಲಭವಲ್ಲ.

ಕೊನೆಯದಾಗಿ, ಬದುಕು ಕುದುರೆ ಪಂದ್ಯವಲ್ಲ. ಇಲ್ಲಿ ಗೆದ್ದವನೇ ಎಲ್ಲವನ್ನೂ ಕೊಂಡೊಯ್ಯುವಂತಿಲ್ಲ. ಎಲ್ಲರಿಗೂ ತಮ್ಮದೇ ಪಾಲಿನ ಯಶಸ್ಸು, ಪ್ರಾಮುಖ್ಯತೆಗಳಿವೆ. ವಿರಾಮೋದ್ಯಮದಲ್ಲಿ ಗುರುತಿಸಲ್ಪಡಬೇಕಿದ್ದರೆ ಅಥವಾ ಪ್ರಾಮುಖ್ಯತೆ ಪಡೆಯಬೇಕಿದ್ದರೆ ಪುಸ್ತಕಗಳು ಮತ್ತು ಗ್ರಂಥಾಲಯಗಳು ಪ್ರಪ್ರಥಮ ಸ್ಥಾನದಲ್ಲಿಯೇ ಇರಬೇಕಿಲ್ಲ. ಅದಿಲ್ಲದೆಯೂ ಇವು ತಮ್ಮ ಪ್ರಾಮುಖ್ಯತೆಯನ್ನು ಕಾಯ್ದುಕೊಳ್ಳಬಹುದು. ಮೊದಲ ಹತ್ತು ಅದ್ಯತೆಗಳಲ್ಲಿಲ್ಲದಿದ್ದರೇನಂತೆ ನಮ್ಮ ಅಯ್ಕೆಯಲ್ಲಿ ಪುಸ್ತಕಗಳು ಹನ್ನೊಂದನೆಯ ಅದ್ಯತೆಯನ್ನಾದರೂ ಪಡೆದರೆ ಪುಸ್ತಕ ಸಂಸ್ಕೃತಿ ಉಳಿದೀತು ಬೆಳಿದೀತು.

## ಗ್ರಂಥಋಣ

Costa, Dora. "Less of luxury: The role of recreation since 1888". NBER working paper No. 6054. MIT, June 1997.

The Economist, "The American way of leisure", The Economist, 1-7 March 1997, p42.

The Economist, "Fun for the masses", The Economist, 2-8 August 1997, p66.

Gratton, Chris and Taylor, Peter. Economics of leisure services management. 2ed. London: Longman, 1992.

Sridhar, M S. "Beware of electronic libraries / media". An invited paper for 15th Annual Convention and Conference of Society for Information Science on 'Digital Libraries', 18-20 January 1996, Indian Institute of Science, Bangalore. (Malwad, N M et. al., ed. Digital libraries: dynamic storehouse of digital information. New Delhi, New Age International Ltd., 1996, p234-240).

--------------. " Are books `inferior goods' of leisure industry ?", Library Science with a slant to Documentation and Information Studies, 34 (4) December 1997, 159-162.

* ಕನ್ನಡ ಪ್ರಭ, ಏಪ್ರಿಲ್ ೨೩, ೨೦೦೩, ಪು. ೬, ೮.

## ಲೇಖಕರ ವಿವರ



ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ३೫ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, 1978 ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್‌ರವರು ನಾಲ್ಕು ಪುಸ್ತಕಗಳು ಹಾಗೂ ೬೪ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪಠ್ಯಗಳನ್ನೂ ಬರೆದಿದ್ದಾರೆ.  ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಾಲಯ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಪಠ್ಯ ಸಾಮಾಗ್ರಿಯನ್ನು ರಚಿಸಿದ್ದು, ಇದಲ್ಲದೆ ಸುಮಾರು ೨೨ ಲೇಖನಗಳನ್ನು ವಿವಿಧ ಸಮ್ಮೇಳನಗಳಲ್ಲಿ ಮಂಡಿಸಿದ್ದಾರೆ.

E-mail: sridharmirle@yahoo.com, mirlesridhar@gmail.com, sridhar@isac.gov.in ; Phone: 91-80-25084451; Fax: 91-80-25084475.